ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೨ನೇ ನವಂಬರ್ ೧೯೯೦, ಮಾರ್ಗಶಿರ ೧, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೧೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮೂತಿನ ಮೂಲಕ ನೀಡಲಾದ ಉತ್ತರಗಳು

ಕೋಲಾರ ಜಿಲ್ಲೆಯ ದರಖಾಸ್ತು ಜಮೀನಿನ ಬಗ್ಗೆ

೪೪೫. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಲಭ್ಯವಿರುವ ದರಖಾಸ್ತು ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರ ಪ್ರಕಾರ ವಿಲೇವಾರಿಗಾಗಿ ಲಭ್ಯವಿರುವ ಜಮೀನುಗಳ ವಿವರಗಳು ದಿನಾಂಕ ೧-೭-೧೯೯೦ರಲ್ಲಿದ್ದಂತೆ (ತಾಲ್ಲೂಕುವಾರು) ಈ ಕೆಳಕಂಡಂತಿರುತ್ತವೆ.

		ಎಕರೆ-ಗುಂಟೆ
೧	ಕೋಲಾರ ತಾಲ್ಲೂಕು	
೨	ಮಾಲೂರು	
೩	ಬಂಗಾರಪೇಟೆ	ಇಲ್ಲ
೪	ಮುಳಬಾಗಿಲು	
೫	ಶ್ರೀನಿವಾಸಪುರ	
೬	ಚಿಕ್ಕಬಳ್ಳಾಪುರ	೬.೦೦
೭	ಚಿಂತಾಮಣಿ	೨೮ ೩೫
೮	ಶಿಡ್ಲಘಟ್ಟ	ಇಲ್ಲ
೯	ಗೌರಿಬಿದನೂರು	ಇಲ್ಲ
೧೦	ಬಾಗೇಪಲ್ಲಿ	೭೨.೦೮
೧೧	ಗುಡಿಬಂಡೆ	೧೪೩.೧೨

ಶ್ರೀ ಎ. ನಾಗರಾಜು.—ಸನ್ಮಾನ್ಯ ಅಧ್ಯಕ್ಷರೆ, ನನಗೆ ಬಂದಿರುವ ಉತ್ತರದಲ್ಲಿ, ಗುಡಿಬಂಡೆ, ಬಾಗೇಪಲ್ಲಿ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಮಾತ್ರ ಮಂಜೂರಾತಿಗೆ ಯೋಗ್ಯವಾದ ಜಮೀನಿದೆ, ಬೇರೆ ತಾಲ್ಲೂಕುಗಳಲ್ಲಿ ಇಲ್ಲ ಎಂದು ಉತ್ತರ ಬಂದಿದೆ. ಆದರೆ ಕೋಲಾರ ಜಿಲ್ಲೆಯಲ್ಲಿ ಬಹಳಷ್ಟು ಸಣ್ಣ ರೈತರು, ಮತ್ತು ಹರಿಜನರು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆ. ಇದನ್ನು ಸಕ್ರಮಗೊಳಿಸುವಂಥ ಕಾರ್ಯಕ್ರಮ ಹೊಸ ಸರ್ಕಾರದ ಮುಂದೆ ಇದಯೇ ? ಇದರ ಬಗ್ಗೆ ಮಾಹಿತಿಯನ್ನು